**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ**
**ಕನಕಪುರ**

## ಸಿ.ಸಿ ನಂಃ 491/2009

| | | | |
|---|---|---|---|
| **ಚಾಸಾ ಃ** | **8** | **ಪ್ರಾಸಾಃ-** | **3** |

**ದಿಃ 13.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ **ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಮದ್ಯದ ಬಾಟಲ್ ಗಳನ್ನು ವಶಪಡಿಸಿಕೊಂಡ ಮನೆ ಹೆಂಚಿನ ಮನೆಯಾಗಿರುತ್ತದೆ. ಸದರಿ ಮನೆಯ ಪ್ರವೇಶ ದ್ವಾರದ ಎಡಭಾಗದಲ್ಲಿ ರೂಂ ಇತ್ತು. ರೂಂ ನ ಯಾವ ಭಾಗದಲ್ಲಿ ದಾಸ್ತಾನು ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ವಶಪಡಿಸಿಕೊಂಡ ಮದ್ಯದ ಬ್ಯಾಚ್ ನಂಬರ್, ತಯಾರಿಕಾ ದಿನಾಂಕ, ಕಂಪನಿಯ ಬಗ್ಗೆ ಮಹಜರ್ ನಲ್ಲಿ ನಮೂದು ಇದೆ. ರಾತ್ರಿ ಸಮಯವಾದ ಕಾರಣ ಗ್ರಾಮಸ್ಥರ ಸಹಿ ಮಹಜರ್ ಗೆ ಪಡೆದಿಲ್ಲ. ಮಹಜರ್ ಗೆ ಸಹಿ ಹಾಕಿದದವರು ಕನಕಪುರ ಮತ್ತು ಚನ್ನಪಟ್ಟಣದ ನಿವಾಸಿಗಳು ಎಂದರೆ ಸರಿ. ನನಗೆ ಆ ದಿನ ಯಾವುದೇ ಮಾಹಿತಿ ಬಂದಿರಲಿಲ್ಲ, ನಾನು ಗಸ್ತಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮದ್ಯವನ್ನು

ವಶಪಡಿಸಿಕೊಂಡು ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಮದ್ಯ ನಾಶಪಡಿಸುವವರೆಗೂ ಠಾಣೆಯಲ್ಲೇ ಇರುತ್ತವೆ ಎಂದರೆ ಸರಿ. ನಾವು ಆರೋಪಿಯಿಂದ ಯಾವುದೇ ಮದ್ಯವನ್ನು ವಶಪಡಿಸಿಕೊಂಡಿಲ್ಲ, ಠಾಣೆಯಲ್ಲಿನ ಮದ್ಯವನ್ನು ಬಳಸಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾವು ಯಾವುದೇ ಗ್ರಾಮಕ್ಕೆ ಹೋಗಿರಲಿಲ್ಲ, ಯಾವುದೇ ಧಾಳಿ ಮಾಡಿ ಮದ್ಯವನ್ನು ವಶಪಡಿಸಿಕೊಂಡಿಲ್ಲ, ಮಹಜರ್ ಅನ್ನು ಠಾಣೆಯಲ್ಲಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಠಾಣಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಗಿಯಿತು.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**

**ಓ ಹೇ ಕೇ ಸ ಇ**